# ಮೈಸೂರು ವಿಶ್ವವಿದ್ಯಾನಿಲಯ

DPES in Physical Education & Sports Sciences
University of Mysore
MYSORE-570005
No. 150
19/11/2020
Sports Pavilion

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ವಿಷಯ: 2020–21ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1. ಅಧ್ಯಕ್ಷರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು, ಇವರ ಪತ್ರ ಸಂಖ್ಯೆ ಡಿಪಿಇಎಸ್ಎಸ್/184/2020–21 ದಿನಾಂಕ 12.10.2020.
2. ಮಾನ್ಯ ಕುಲಪತಿಯವರ ಆದೇಶ ದಿನಾಂಕ 11.11.2020

** * **

## ಆದೇಶ ಸಂಖ್ಯೆ: ಇಟಿ9/173/2017–18 ದಿನಾಂಕ 12ನೇ ನವೆಂಬರ್ 2020.

ಮಾನ್ಯ ಕುಲಪತಿಯವರ ಅನುಮೋದನೆಯ ಮೇರೆಗೆ, 2020–21ನೇ ಶೈಕ್ಷಣಿಕ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಬೋಧನಾ ಕಾರ್ಯ ನಿರ್ವಹಿಸಲು ಈ ಕೆಳಕಂಡ ಅತಿಥಿ ಉಪನ್ಯಾಸಕರುಗಳನ್ನು ಆಹ್ವಾನಿಸಲಾಗಿದೆ.

| ಅತಿಥಿ ಉಪನ್ಯಾಸಕರ ಹೆಸರು | ವಿಷಯ | ವಾರಕ್ಕೆ ಒಟ್ಟು ಬೋಧನಾ (ಥಿಯರಿ / ಪ್ರಾಕ್ಟಿಕಲ್) ಕಾರ್ಯ (ಗಂಟೆಗಳಲ್ಲಿ) * | ಸ್ನಾತಕೋತ್ತರ ವಿಭಾಗ / ಸ್ನಾತಕೋತ್ತರ ಕೇಂದ್ರ / ಘಟಕ ಕಾಲೇಜು | ಮಾಹೆಯಾನ ಸಂಭಾವನೆ ರೂ.ಗಳಲ್ಲಿ |
|---|---|---|---|---|
| ಸಂತೋಷ ಎಂ.ಎಸ್, ಅತಿಥಿ ಉಪನ್ಯಾಸಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. | ಬಿಪಿಎಡ್/ ಎಂಪಿಎಡ್ | 12 | ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ | 19,500/- |

* ಬೋಧನಾ ವಿಷಯ, ಥಿಯರಿ/ಪ್ರಾಕ್ಟಿಕಲ್ ಕಾರ್ಯದ ಬಗ್ಗೆ ಸಂಬಂಧಿಸಿದ ವಿಭಾಗದ ಅಧ್ಯಕ್ಷರು ಹಂಚಿಕೆ ಮಾಡುವರು. **ಎರಡು ಪ್ರಾಯೋಗಿಕ ಬೋಧನಾ ಕಾರ್ಯವು ಒಂದು ಥಿಯರಿ ಬೋಧನಾ ಕಾರ್ಯಕ್ಕೆ ಸಮಾನವಾಗಿರುತ್ತದೆ.**

ಆಹ್ವಾನಿತ ಅತಿಥಿ ಉಪನ್ಯಾಸಕರು ಈ ಆದೇಶ ತಲುಪಿದ 7 ದಿನಗಳೊಳಗೆ ಸಂಬಂಧಪಟ್ಟ ಅಧ್ಯಯನ ವಿಭಾಗದ ಅಧ್ಯಕ್ಷರಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಈ ಆದೇಶವು ರದ್ದಾಗುತ್ತದೆ.

ಈ ವೆಚ್ಚವನ್ನು ಆಯವ್ಯಯ ಅಂದಾಜುಗಳ "ವೇತನ ಮತ್ತು ಭತ್ಯೆಗಳು" ಖಾತೆಯ "ತಾತ್ಕಾಲಿಕ ಅಧ್ಯಾಪಕರ ವೇತನ" (ಕೋಡ್ 228) ಶೀರ್ಷಿಕೆಯಿಂದ ಭರಿಸಬಹುದಾಗಿದೆ.

**ಷರತ್ತುಗಳು:**

ಅ. ಪ್ರತಿ ವಾರದಲ್ಲಿ 12 ಗಂಟೆಗಳ ಬೋಧನಾ ಕಾರ್ಯನಿರ್ವಹಿಸಲು ಆಹ್ವಾನಿತವಾಗಿರುವ ಅತಿಥಿ ಉಪನ್ಯಾಸಕರುಗಳು ಪ್ರತಿದಿನ ಅಧ್ಯಯನ ವಿಭಾಗದ ಕೆಲಸದ ಪೂರ್ಣಾವಧಿಯಲ್ಲಿ ಕಡ್ಡಾಯವಾಗಿ ಉಪಸ್ಥಿತರಿದ್ದು, ವಿದ್ಯಾರ್ಥಿಗಳ ಮಾರ್ಗದರ್ಶನಕ್ಕೆ ಲಭ್ಯವಿರಬೇಕು ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ ಕಾಶಿಇ/44/ಅಉನೇ/2012–13ನೇ ಪಾವಿ–1, ದಿನಾಂಕ 02.7.2013ರ ಪ್ರಕಾರ ಕಾರ್ಯ ನಿರ್ವಹಿಸಬೇಕಾಗಿರುತ್ತದೆ.

ಆ. ಅತಿಥಿ ಉಪನ್ಯಾಸಕರು ಪ್ರತಿ ಮಾಹೆಯಲ್ಲಿ ಒಂದು ದಿನ ಸಾಂದರ್ಭಿಕ ರಜೆಯನ್ನು ಪಡೆಯಲು ಅರ್ಹರಿರುತ್ತಾರೆಮತ್ತು ಈ ರಜೆ ಅವಧಿಯ ಬೋಧನಾ ಕಾರ್ಯಭಾರವನ್ನು ಮುಂದಿನ ಮಾಹೆಯೊಳಗೆ ಸರಿದೂಗಿಸುವುದು.

ಇ. ಹಂಚಿಕೆಯಾಗಿರುವ ಬೋಧನಾ ತರಗತಿಗಳನ್ನು ತೆಗೆದುಕೊಳ್ಳಲು ವಿಫಲರಾದಲ್ಲಿ, ಗೈರುಹಾರಾದ ದಿನದ ಸಂಭಾವನೆಯನ್ನು ಕಡಿತಗೊಳಿಸಲಾಗುವುದು.

ಈ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2020–21ನೇ ಶೈಕ್ಷಣಿಕ ವರ್ಷದಲ್ಲಿ 12 ಗಂಟೆಗಳ ಕಾರ್ಯಭಾರ ನಿರ್ವಹಿಸುವ ಅತಿಥಿ ಉಪನ್ಯಸಾಕರುಗಳು ಬೇರೆ ಸರ್ಕಾರಿ ಕಾಲೇಜು ಅಥವಾ ಖಾಸಗಿ ಕಾಲೇಜುಗಳಲ್ಲಿ

ಕಾರ್ಯನಿರ್ವಹಿಸಬಾರದ ಆಹ್ವಾನಿತ ಅತಿಥಿ ಉಪನ್ಯಾಸಕರು ಕೆಲಸಕ್ಕೆ ವರದಿ ಮಾಡಿಕೊಳ್ಳುವಾಗ ಈ ಕೆಳಕಂಡಂತೆ ಮುಚ್ಚಳಿಕೆಯನ್ನು ನೀಡತಕ್ಕದ್ದು.

ಮುಚ್ಚಳಿಕೆ

1. ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ವಿಶ್ವವಿದ್ಯಾನಿಲಯವು 2020–21ನೇ ಶೈಕ್ಷಣಿಕ ವರ್ಷಕ್ಕೆ ಅಥವಾ ಮುಂದಿನ ಆದೇಶದವರೆಗೆ, ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಹೆಚ್ಚುವರಿ ಬೋಧನಾ ಕಾರ್ಯವನ್ನು ನಿರ್ವಹಿಸಲು ನನ್ನನ್ನು ಆಹ್ವಾನಿಸಿರುವುದು ತಾತ್ಕಾಲಿಕವಾಗಿರುತ್ತದೆ ಎಂದು ತಿಳಿದಿರುತ್ತೇನೆ. ಜೊತೆಗೆ ಕಾರಣಾಂತರಗಳಿಂದ ಹೆಚ್ಚುವರಿ ಭೋಧನಾ ಕಾರ್ಯದಲ್ಲಿ ಕೊರತೆಯುಂಟಾದಲ್ಲಿ ವಿಶ್ವವಿದ್ಯಾನಿಲಯವು ಯಾವುದೇ ಮುನ್ಸೂಚನೆ ಇಲ್ಲದಂತೆ ಹಾಗೂ ಯಾವುದೇ ಕಾರಣ ನೀಡದೆ ನನಗೆ ನೀಡಿರುವ ಅತಿಥಿ ಉಪನ್ಯಾಸಕರ ಆಹ್ವಾನವನ್ನು ಹಿಂಪಡೆಯಬಹುದಾಗಿದೆ.
2. ನಾನು ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಕಾಶಿಇ/44/ಆಉನೇ/2012–13ನೇ ಪಾವಿ–1 ದಿನಾಂಕ 02.7.2013ರಲ್ಲಿ ಸೂಚಿಸಿರುವಂತೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕನಾಗಿ ಕೆಲಸ ನಿರ್ವಹಿಸುತ್ತಿರುವಾಗ ಯಾವುದೇ ಸರ್ಕಾರಿ/ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕನಾಗಿ ಕರ್ತವ್ಯ ನಿರ್ವಹಿಸುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ ಹಾಗೂ ಹಾಗೇನಾದರೂ ಕೆಲಸ ನಿರ್ವಹಿಸುವುದು ಕಂಡು ಬಂದಲ್ಲಿ, ಈ ನೇಮಕಾತಿಯನ್ನು ಯಾವುದೇ ಸೂಚನೆ ನೀಡದೇ ರದ್ದುಪಡಿಸಲಾಗುವುದೆಂದು ತಿಳಿದಿರುತ್ತೇನೆ.
3. ಮೇಲಿನ ಎಲ್ಲಾ ಷರತ್ತುಗಳಿಗೆ ಬದ್ಧರಾಗಿ ತಾವು ನೀಡಿರುವ ಅತಿಥಿ ಉಪನ್ಯಾಸಕರ ಆಹ್ವಾನವನ್ನು ಒಪ್ಪಿಕೊಂಡಿರುತ್ತೇನೆ.

ಆದೇಶದ ಮೇರೆಗೆ,

19/11/2020

ಕುಲಸಚಿವ

ಇವರಿಗೆ:

1. ಸಂಬಂಧಪಟ್ಟ ಅತಿಥಿ ಉಪನ್ಯಾಸಕರುಗಳಿಗೆ–ವಿಭಾಗದ ಅಧ್ಯಕ್ಷರ ಮುಖಾಂತರ.
2. ಅಧ್ಯಕ್ಷರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು–ಅತಿಥಿ ಉಪನ್ಯಾಸಕರಿಂದ ಮೇಲೆ ತಿಳಿಸಿರುವ ಮುಚ್ಚಳಿಕೆಯನ್ನು ಕಡ್ಡಾಯವಾಗಿ ಬರೆಸಿಕೊಳ್ಳುವುದು ಮತ್ತು ವಿದ್ಯಾರ್ಹತೆಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ದೃಢಪಡಿಸಿಕೊಂಡು ನಂತರ ಕೆಲಸಕ್ಕೆ ವರದಿ ಮಾಡಿಸಿಕೊಳ್ಳುವುದು.
3. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಹಣಕಾಸು ಅಧಿಕಾರಿಯವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಆಡಳಿತಾಧಿಕಾರಿಗಳು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು.
6. ಉಪಕುಲಸಚಿವರು (ಸಾಮಾನ್ಯ)/ಸಹಾಯಕ ಕುಲಸಚಿವ/ಅಧೀಕ್ಷಕರು (ಸಿಬ್ಬಂದಿ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಹಣಕಾಸು ಅಧಿಕಾರಿ/ಕುಲಸಚಿವ(ಪ) ಅವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.